ಕವಯಿತ್ರಿ ಶ್ರುತಿ ಬಿ.ಆರ್. ವೃತ್ತಿಯಲ್ಲಿ ಕೆಎಎಸ್ ಅಧಿಕಾರಿ. ಚಿಕ್ಕಮಗಳೂರಿನ ತರೀಕೆರೆ ಹುಟ್ಟೂರು. ಪ್ರಸ್ತುತ ಬೆಂಗಳೂರು ನಿವಾಸಿ. ಓದಿದ್ದು ಅರ್ಥಶಾಸ್ತ್ರ. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಥಮ ರ್‍ಯಾಂಕ್ ಮತ್ತು ಐದು ಚಿನ್ನದ ಪದಕಗಳನ್ನು ಪಡೆದವರು. ಅರ್ಥಶಾಸ್ತ್ರದಲ್ಲಿಯೇ ಪಿಎಚ್.ಡಿ. ಮಾಡಿದ್ದಾರೆ. 'ಜೀರೋ ಬ್ಯಾಲೆನ್ಸ್' ಅವರ ಕವನ ಸಂಕಲನ.

ಬಗ್ಗೆ ಹೇಳಿ, 'ಅಷ್ಟಕ್ಕೂ ನನಗೆ ಇದರಲ್ಲೆಲ್ಲ ಅಷ್ಟು ನಂಬಿಕೆಯಿಲ್ಲ. ಆದರೆ, ನಿನ್ನ ಸಮಸ್ಯೆಗೆ ಪರಿಹಾರ ಸಿಗುವುದಾದರೆ ಮುಂದಿನ ಹುಣ್ಣಿಮೆಗೆ ಅವರ ಹತ್ರ ಹೋಗಿ ಬಾ' ಎಂದು ಅವರ ವಿಳಾಸ, ಫೋನ್ ನಂಬರ್ ಎಲ್ಲವೂ ಅವಳಿಗೊಪ್ಪಿಸಿ ಆಯಿತು. ಯಾವಾಗ ಹುಣ್ಣಿಮೆ ಬಂದೀತೊ ಎಂದು ಗೀತಾ ದಿನ ಎಣಿಸುತ್ತಾ ಚಿಂತೆಗೆ ಅಲ್ಪವಿರಾಮ ಹಾಕಿ, ಊಟ–ನಿದ್ದೆ ಸರಿಯಾಗಿ ಮಾಡಲಾರಂಭಿಸಿ ಮತ್ತೆ ಸ್ವಲ್ಪ ಗೆಲುವಾದಳು. ಸದ್ಯ, ಏನೋ ಪರಿಹಾರ ಸಿಗಬಹುದೆಂಬ ಅವಳ ನಿರೀಕ್ಷೆ ಹುಸಿಯಾಗದಿರಲಿ ಎಂದು ನಾನೂ ದೇವರಲ್ಲಿ ಪ್ರಾರ್ಥಿಸಿದೆ.

ಹುಣ್ಣಿಮೆಗಿಂತ ಐದಾರು ದಿನ ಮೊದಲೇ ಅವರಿಗೆ ಫೋನ್ ಮಾಡಿ ಗೀತಾ ಅಪಾಯಿಂಟ್‌ಮೆಂಟ್ ತೆಗೆದುಕೊಂಡಳು. ಫೋನ್ ಎತ್ತಿದ ಗಂಡಸು ಹುಣ್ಣಿಮೆಯ ದಿನ ಸಂಜೆ ಸರಿಯಾಗಿ ಐದೂವರೆಗೆ ಬರಬೇಕು, ತಡವಾಗಿ ಬಂದರೆ ದೇವಿ ನಿಮ್ಮ ಪ್ರಶ್ನೆಗೆ ಉತ್ತರ ಹೇಳಲ್ಲ ಎಂದು ಹೇಳುವುದರ ಜೊತೆಗೆ, ದೇವಿಯ ಪೂಜೆಗೆ ಬರುವವರು ತರಬೇಕಾದ ಸಾಮಾನುಗಳ ಪಟ್ಟಿಯನ್ನು ಬೇರೆ ತಿಳಿಸಿದ್ದ. ದೇವರು ಬರುವವರ ಹತ್ತಿರ ಹೋಗುವುದಕ್ಕೆ ಇನ್ನೂ ಮೂರು ದಿನಗಳಿದ್ದಾಗಲೇ, ನಾನು ಅವಳ ಜೊತೆ ಬರಬೇಕೆಂದು ಗೀತಾ ಪೀಡಿಸತೊಡಗಿದಳು. ಅವಳ ಗಂಡನಿಗೂ ಇವಳ ಜೊತೆ ಜ್ಯೋತಿಷಿಗಳ ಬಳಿ ಅಲೆದು ಸಾಕಾಗಿ 'ಇನ್ನೆಲ್ಲೂ ಬರಲ್ಲ' ಎಂದಿದ್ದಕ್ಕೆ ಈಗ ನನಗೆ ದುಂಬಾಲು ಬಿದ್ದಿದ್ದಳು. ಅಲ್ಲಿ ಎಷ್ಟು ರಷ್ ಇರುತ್ತೋ, ಮನೆಗೆ ಹೋಗಲು ತಡವಾದರೇನು ಮಾಡೋಣ ಎಂದು ಚಿಂತೆಯಾದರೂ ಅವಳ ಗೋಗರೆತಕ್ಕೆ ಅಸ್ತು ಎಂದಿದ್ದೆ.

***

ಗೀತಾ ಇವತ್ತು ಬೆಳಗ್ಗೆಯೇ ದೇವಿಯ ಪೂಜೆಗೆ ಹೇಳಿದ ಸಾಮಾನುಗಳನ್ನೆಲ್ಲ ತಯಾರಾಗಿಟ್ಟುಕೊಂಡು ದೇವರು ಬರುವವರ ಮನೆಗೆ ಹೋಗಲು




ಸಂಜೆಯಾಗುವುದನ್ನೇ ಕಾಯುತ್ತಿದ್ದಳು. ನನಗೂ ಬೇಗ ಕೆಲಸಗಳನ್ನು ಮುಗಿಸಿ ಸಂಜೆ ಐದು ಗಂಟೆಗೇ ಹೊರಡಬೇಕೆಂದು ನೆನಪಿಸಿದ್ದಳು. ಅವಳ ಅವಸರದ ವೇಗಕ್ಕೆ ಸಮಯ ಸಾಗಬೇಕಲ್ಲ. ಇಡೀ ದಿನ ಬಾಲ ಸುಟ್ಟ ಬೆಕ್ಕಿನಂತೆ ಚಡಪಡಿಕೆ ಅವಳದ್ದು. ಅಂತೂ ಇಂತೂ ಸಂಜೆಯಾಯಿತು. ನಡೆದು ಹೋದರೆ ತಡವಾಗಬಹುದೆಂದು ಮಿನಿಮಮ್ ಚಾರ್ಜ್ ಕೊಟ್ಟು ಆಟೋದಲ್ಲಿ ಹೋದೆವು. ಅವರು ಹೇಳಿದ ಕ್ರಾಸ್ ತಲುಪಿ ಕರೆ ಮಾಡಿದಾಗ ಅಲ್ಲಿಂದ ನಾಲ್ಕನೇ ಮನೆ 'ವೆಂಕಟೇಶ್ವರ ನಿಲಯ' ಎಂಬ ಹೆಸರಿನ ಮನೆಗೆ ಬರಲು ಹೇಳಿದರು. ದೊಡ್ಡ ಗೇಟು ತೆರೆದ ತಕ್ಷಣ ಹಳೆಯ ಕಾಲದ ಎರಡು ತಾರಸಿ ಮನೆಗಳು – ಒಂದು